


International Journal of Kannada Research
www.kannadajournal.com

**ISSN: 2454–5813**
IJSR 2015; 1(1): 48-50
© 2015 IJKS
www.kannadajournal.com
Received: 08-06-2015
Accepted: 11-07-2015

**ಡಾ. ಧನಂಜಯ ಬಿ.ಜಿ**
ಸಹ ಪ್ರಾಧ್ಯಾಪಕರು ಸಮಾಜಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸಮನೆ, ಭದ್ರಾವತಿ, ಕರ್ನಾಟಕ, ಭಾರತ

**Correspondence**
**ಡಾ. ಧನಂಜಯ ಬಿ.ಜಿ**
ಸಹ ಪ್ರಾಧ್ಯಾಪಕರು ಸಮಾಜಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸಮನೆ, ಭದ್ರಾವತಿ, ಕರ್ನಾಟಕ, ಭಾರತ

# ಮಹಿಳೆ: ಸಮಾಜ, ಸಮಸ್ಯೆ ಮತ್ತು ಸವಾಲುಗಳು

**ಡಾ. ಧನಂಜಯ ಬಿ.ಜಿ**

**ಪೀಠಿಕೆ**

"ಯಾವ ಮನೆಯಲ್ಲೇ ಆಗಲಿ, ದೇಶದಲ್ಲೇ ಆಗಲಿ ಸ್ತ್ರಿಯನ್ನು ಗೌರವದಿಂದ
ನೋಡುವುದಿಲ್ಲವೋ, ಎಲ್ಲಿ ಸ್ತ್ರೀಯರು ಕೊರಗಿನ ಜೀವನ ಬಾಳುವರೋ
ಅಲ್ಲಿ ಪುರುಷರಿಗೆ ಶ್ರೇಯಸ್ಸಾಗಲಾರದು"

–ಸ್ವಾಮಿ ವಿವೇಕಾನಂದ

ಸುಪ್ರಸಿದ್ಧ ಸಮಾಜಶಾಸ್ತ್ರಜ್ಞ ಎಂ.ಎಸ್. ಶ್ರೀನಿವಾಸ್ ಹೇಳುವಂತೆ "ಮಹಿಳೆಯರು ವಾಸಿಸುವ ಸ್ಥಳ ಮತ್ತು ಅವರು ಸದಸ್ಯರಾಗಿರುವ ಜಾತಿ ಮತ್ತು ಅವರ ಆರ್ಥಿಕತೆ ಇವು ಮಹಿಳೆಯರ ಸಮಸ್ಯೆ–ಸವಾಲುಗಳ ಸ್ವರೂಪವನ್ನು ನಿರ್ಧರಿಸುತ್ತವೆ". ಭಾರತದಲ್ಲಿ ಈ ಮಾತು ಅಕ್ಷರಶಃ ಸತ್ಯ ಮತ್ತು ವಾಸ್ತವವಾದ ವಿಚಾರವಾಗಿದೆ. ಕಾರಣ ನಗರ ಪ್ರದೇಶದ ಮಹಿಳೆಯರು ಗ್ರಾಮೀಣ ಪ್ರದೇಶದ ಮಹಿಳೆಯರಿಗಿಂತ ಉತ್ತಮ ಅಂತಸ್ತು, ರಾಜಕೀಯದಲ್ಲಿ ಹೆಚ್ಚಿನ ಸಹಭಾಗಿತ್ವ, ಅಧಿಕವಾಗುತ್ತಿರುವ ಶೈಕ್ಷಣಿಕತೆ, ಸಾಮಾಜಿಕ ಸುಧಾರಣೆ ಚಟುವಟಿಕೆಗಳು ಮುಂತಾದ ಪ್ರಕ್ರಿಯೆಗಳಲ್ಲಿ ಮಂಚೂಣಿಯಲ್ಲಿದ್ದಾರೆ. ಆದರೆ ಗ್ರಾಮೀಣ ಪ್ರದೇಶದ ಮಹಿಳೆಯರು ಇಂದಿಗೂ ಪೂರ್ಣವಾದ ಸ್ವಾತಂತ್ರ್ಯ, ಸಮಾನತೆ, ಅಧಿಕಾರ ಮತ್ತು ಅಂತಸ್ತು ಹೊಂದಿಲ್ಲ ಎನ್ನಬಹುದು.

ದಕ್ಷಿಣ ಏಷ್ಯಾದ ಎಲ್ಲಾ ದೇಶಗಳ ಮಹಿಳೆಯರು ಹೆಚ್ಚು ಕಡಿಮೆ ಒಂದೇ ಬಗೆಯ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ ಎನ್ನಬಹುದು. ಶತಮಾನಗಳಿಂದಲೂ ಭಾರತೀಯ ಸ್ತ್ರೀಯರು ವೇದಗಳ ಕಾಲವನ್ನು ಹೊರತುಪಡಿಸಿದರೆ ಮತ್ಯಾವ ಕಾಲದಲ್ಲಿಯೂ ಉನ್ನತ ಸ್ಥಾನಮಾನವನ್ನು ಹೊಂದಿರುವ ಉದಾಹರಣೆ ಕಡಿಮೆಯೇ ಎನ್ನಬಹುದು.

ಸ್ವಾತಂತ್ರ್ಯ ನಂತರ ಮಹಿಳೆಯ ಸ್ಥಾನಮಾನ ಉತ್ತಮಪಡಿಸುವ ನಿಟ್ಟಿನಲ್ಲಿ ಸರ್ಕಾರಗಳು ಪ್ರಯತ್ನಿಸುತ್ತಿವೆ. ಅಧಿಕಾರ ವಿಕೇಂದ್ರೀಕರಣ, ಮಹಿಳಾ ಸಶಕ್ತೀಕರಣ, ರಾಜಕೀಯ ಮೀಸಲಾತಿ ಮುಂತಾದ ಅಂಶಗಳು ಮಹಿಳೆಯರ ಸ್ಥಾನಮಾನ ಹೆಚ್ಚಿಸುವ ಮತ್ತು ಅಭಿವೃದ್ಧಿಯಲ್ಲಿ ಅವರನ್ನು ತೊಡಗಿಸುವ ಒಂದು ಪ್ರಯತ್ನವಾಗಿದೆ. ಆದರೂ ಅಸಂಘಟಿತ ವಲಯದಲ್ಲಿ ಕೃಷಿ ಕ್ಷೇತ್ರದಲ್ಲಿ ಮತ್ತು ದಿನಗೂಲಿ ಕಾರ್ಮಿಕರಾಗಿ ದುಡಿಯುವ ಮಹಿಳೆಯರು ಸರಿಯಾದ ವೇತನ, ವೈದ್ಯಕೀಯ ಮತ್ತು ನಾಗರೀಕ ಸೌಲಭ್ಯವಿಲ್ಲದೆ ಇಂದಿಗೂ ಪರಿತಪಿಸುತ್ತಿದ್ದಾರೆ.

ಭಾರತದ ಸ್ತ್ರೀಯರಲ್ಲಿ ಹಿಂದಿನ ಅದೆಷ್ಟೋ ಸಮಸ್ಯೆಗಳು ಈಗ ಇಲ್ಲದಿರಬಹುದು. ಉದಾ : ಸತೀ ಸಹಗಮನ ಬಾಲ್ಯ ವಿವಾಹ ವಿಧವೆಯರ ಶೋಷಣೆ, ದೇವದಾಸಿ ಮುಂತಾದ ಸಮಸ್ಯೆಗಳು ಈಗ ಕಣ್ಮರೆಯಾಗಿದೆ. ಭಾರತದಲ್ಲಿ ಉಂಟಾದ ಆರ್ಥಿಕ–ವೈಜ್ಞಾನಿಕ ಬೆಳವಣಿಗೆ ಶಿಕ್ಷಣದ ವ್ಯಾಪಕತೆ, ರಾಜಕೀಯ ಮತ್ತು ಸಾಮಾಜಿಕ ಆಂದೋಲನ, ನಗರೀಕರಣ, ಆಧುನೀಕರಣ ಮುಂತಾದ ಅಂಶಗಳು ಸ್ತ್ರೀಯರ ಬಗ್ಗೆ ಒಂದು ಬಗೆಯ ಉದಾರನೀತಿ ತಳೆಯಲು ಸಾಧ್ಯವಾಯಿತು. ಅಲ್ಲದೆ ಸಮಾಜದ ಅಭಿವೃದ್ಧಿಯಲ್ಲಿ ಪುರುಷರ ಜೊತೆಗೆ ಕೈ ಜೋಡಿಸಿರುವ ಮಹಿಳೆಯರು ತಮಗೂ ವ್ಯಕ್ತಿತ್ವವಿದೆ. ಪ್ರತಿಭೆಯಿಂದ ಮತ್ತು ಸ್ವಸಾಮರ್ಥ್ಯದಿಂದ ಸ್ವಾಭಿಮಾನವಿದೆ ಎಂಬುದನ್ನು ಸಾಬೀತುಪಡಿಸುತ್ತಿದ್ದಾರೆ. ಆದ್ದರಿಂದ ಇದುವರೆವಿಗೂ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಮಹಿಳೆಯರಿಗೆ ಸಮಾಜದ ಅರ್ಧದಷ್ಟು ಜನರಿಗೆ ಅವರ ಅಂತಸ್ತು ಮತ್ತು ಸಾಮರ್ಥ್ಯಕ್ಕೆ ತಕ್ಕದಾದ ಸ್ಥಾನವನ್ನು ನೀಡುವ ಕೆಲಸ ಭರದಿಂದ ಸಾಗಿದೆ.

ಭಾರತದ ಇಂದಿನ ಬದಲಾದ ಪರಿಸ್ಥಿತಿಯಲ್ಲಿ ಮಹಿಳೆಯರ ಅಂತಸ್ತಿನ ಸುಧಾರಣೆ ಯಾಗುತ್ತಿದ್ದಂತೆ ಅವರು ಹೊಸ ಸಮಸ್ಯೆ ಮತ್ತು ಸವಾಲುಗಳನ್ನು ಎದುರಿಸಬೇಕಾಗಿ ಬಂದಿದೆ. ಹೆಚ್ಚುತ್ತಿರುವ ಸ್ತ್ರೀಯರ ವಿರುದ್ಧ ಅಪರಾಧಗಳು ಕ್ಷೀಣಿಸುತ್ತಿರುವ ಸ್ತ್ರೀಯರ ಸಂಖ್ಯೆ ತಾರತಮ್ಯಕ್ಕೆ ಒಳಗಾಗಿರುವ ಹೆಣ್ಣು ಶಿಶುಗಳು,

ಸ್ತ್ರೀಯರ ಆರೋಗ್ಯದ ಸಮಸ್ಯೆ, ಸ್ತ್ರೀ ಶಿಕ್ಷಣ ಮುಂತಾದ ಸಮಸ್ಯೆಗಳು ಮಹಿಳಾ ಸಮಾಜದ ಬಹುದೊಡ್ಡ ಸವಾಲು ಎನ್ನಬಹುದು.

ಪ್ರಾಚೀನ ಕಾಲದಿಂದಲೂ ಹೆಣ್ಣಿಲ್ಲದ ಸಮಾಜವನ್ನು ಕಲ್ಪಿಸಿಕೊಳ್ಳುವುದು ಅಸಾಧ್ಯ. ಮಹಿಳೆ ಸಮಾಜದ ಅವಿಭಾಜ್ಯ ಅಂಗ. ಮಹಿಳೆ ಎಂದೊಡನೆ ಹಲವು ಪಾತ್ರಗಳು ನಮ್ಮ ಕಣ್ಣೆದುರಿಗೆ ಬರುತ್ತವೆ. ತನ್ನ ಕುಟುಂಬಕ್ಕಾಗಿ ಸರ್ವವನ್ನು ತ್ಯಾಗ ಮಾಡುವ ತಾಯಿಯಾಗಿ, ಗಂಡ ಮತ್ತು ಮಕ್ಕಳ ಅಭ್ಯುದಯಕ್ಕೆ ಹಗಲಿರುಳು ದುಡಿಯುವ ಜೀವನ ಸಂಗಾತಿಯಾಗಿ ಅಣ್ಣ–ತಮ್ಮಂದಿರ ಶ್ರೇಯಸ್ಸನ್ನು ಬಯಸುವ ಸಹೋದರಿಯಾಗಿ, ತಂದೆ–ತಾಯಿಯೇ ಸರ್ವಸ್ವ ಎಂದು ಭಾವಿಸುವ ಮಗಳಾಗಿ, ಹಲವು ಪಾತ್ರಗಳನ್ನು ನಿರ್ವಹಿಸುವ ಮಹಿಳೆ ಸಮಾಜದ ಅಭಿವೃದ್ದಿಯಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಾ ಬಂದಿದ್ದಾಳೆ ಈ ಸಮಾಜದಲ್ಲಿ ಹೆಣ್ಣಿಗೆ ಸರಿ ಸಮಾನವಾದ ವಸ್ತು ಮತ್ತು ವ್ಯಕ್ತಿ ಇಲ್ಲ. ಹೆಣ್ಣನ್ನು ಭೂಮಿಗೆ, ಪ್ರಕೃತಿಗೆ ಸೌಂದರ್ಯಕ್ಕೆ, ಪ್ರೀತಿಗೆ, ತ್ಯಾಗಕ್ಕೆ ಮತ್ತು ಹೊಂದಾಣಿಕೆಗೆ ಹೋಲಿಸಲಾಗುತ್ತಿದೆ. ಸ್ತ್ರೀ ಇಲ್ಲದ ಕುಟುಂಬದ

ರಚನೆ ಕಲ್ಪನೆಗೂ ನಿಲುಕದ್ದು. ಸಮಾಜದಲ್ಲಿ ಇಂದು ಮಹಿಳೆಯರ ಜೀವನದಲ್ಲಿ ಹೊಸ ಅಲೆ ಮತ್ತು ಸವಾಲುಗಳು ಎದ್ದಿವೆ. ಸ್ವತಂತ್ರ ಭಾರತದ ಮಹಿಳೆಯರ ಸ್ಥಾನಮಾನ ವಿಶ್ಲೇಷಣೆಯಲ್ಲಿ ಹಲವು ಹೊಸ ಸವಾಲುಗಳು ಕಾಣುತ್ತೇವೆ. ಮಹಿಳಾ ಪರ ಹೋರಾಟಗಳು ಸೌಲಭ್ಯ ಮತ್ತು ಅನುಕೂಲಕ್ಕಾಗಿ ಎಂಬ ಧೋರಣೆ ಬದಲಾಗಬೇಕು. ಸಮಾಜದಲ್ಲಿ ಮಹಿಳೆಯರು ಸಂವಿಧಾನಬದ್ದ ಹಕ್ಕಿಗಾಗಿ ಮತ್ತು ಸ್ವಾಭಿಮಾನಕ್ಕಾಗಿ ಪರಿಣಾಮಕಾರಿಯಾಗಿ ಹೋರಾಟ ಆರಂಭವಾಗಬೇಕು. ಪ್ರಸ್ತುತ ಹೆಣ್ಣು ತನ್ನನ್ನು ತಾನು ರಕ್ಷಿಸಿಕೊಳ್ಳುವ ಆತ್ಮವಿಶ್ವಾಸ ಮೂಡಿಸಬೇಕು.

1980–90 ರ ನಂತರ ಮಹಿಳೆಯರ ಸ್ಥಾನಮಾನದ ದೃಷ್ಟಿ ಹಾಗೂ ಸಂಪ್ರದಾಯಿಕ ದೃಷ್ಟಿಕೋನ ಬದಲಾಗಿದೆ. ಹಿಂದಿನ ಮಹಿಳೆಯರ ಕುರಿತ ಮೌಲ್ಯಗಳು ಬದಲಾಗುವ ಪ್ರಸ್ತುತ ಸ್ತ್ರೀಯರ ಸ್ಥಾನಮಾನ, ಅಂತಸ್ತು ಮತ್ತು ಗೌರವ ಹೆಚ್ಚಿಸುವ ಅಂದೋಲನದ ಅಗತ್ಯವಿದೆ. ಕೇವಲ ಸಮಾಜದಲ್ಲಿ ಸೌಲಭ್ಯ ಮತ್ತು ಅನುಕೂಲಕ್ಕಾಗಿ ಹೋರಾಟಗಳು ನಡೆಯುತ್ತಿದ್ದರೂ ಅಷ್ಟು ಪರಿಣಾಮಕಾರಿಯಾಗಿಲ್ಲ. ಪುರುಷರು ಸ್ತ್ರೀಯರ ಬಗ್ಗೆ ಹೊಂದಿರುವ ಸ್ಥಾಪಿತ ಧೋರಣೆ ಬದಲಾಗಬೇಕು. ಶೋಷಣೆ ವಿರುದ್ದದ ಹೋರಾಟಗಳು ನಗರ ಪ್ರದೇಶಕ್ಕೆ ಸೀಮಿತವಾಗಬಾರದು. ಗ್ರಾಮೀಣ ಪ್ರದೇಶದ ಮಹಿಳೆಯರ ಪರವಾಗಿ ಹೋರಾಟಗಳು ರೂಪಗೊಳ್ಳಬೇಕು. ಆಧುನಿಕ ಭಾರತೀಯ ಮಹಿಳೆ ಒಂದು ನಿಗೂಢ ರಹಸ್ಯವಾಗಿದ್ದು, ಸಾಂಸ್ಕೃತಿಕ, ಸಾಮಾಜಿಕ ಮತ್ತು ಪರಿಸರದ ಹಿಡಿತ ಮತ್ತು ಬಿಗಿತಕ್ಕೆ ತನ್ನನ್ನು ತಾನು ಒಪ್ಪಿಕೊಂಡಿದ್ದಾಳೆ.

ಮಹಿಳೆ ಮತ್ತು ಸಮಾಜ ಎಂಬ ಪರಿಕಲ್ಪನೆಯಲ್ಲಿ ಮಹಿಳಾ ಸಮುದಾಯವನ್ನು ಸೂಕ್ಷ್ಮವಾಗಿ ಮತ್ತು ಸಂವೇದನಾಶೀಲನೆಯಿಂದ ಅವಲೋಕಿಸಿದಾಗ ಮಹಿಳೆಯರ ವಿರುದ್ದ ಅಪರಾಧಗಳು ಹೆಚ್ಚುತ್ತಿರುವುದು ಆತಂಕಕಾರಿ ವಿಷಯವಾಗಿದೆ. ಅತ್ಯಾಚಾರ, ವರದಕ್ಷಿಣೆ ಕಿರುಕುಳ, ಹಿಂಸೆ, ಅಪಹರಣ, ಚುಂಬನ, ಆಲಿಂಗನ ಮತ್ತು ದೌರ್ಜನ್ಯದಂತ ಪ್ರಕರಣಗಳು ಮತ್ತು ಹೆಣ್ಣು ಮಕ್ಕಳು ಕಾಣೆಯಾಗುವ ಬಗ್ಗೆ ನ್ಯಾಯಾಲಯಗಳೇ ಕಳವಳ ವ್ಯಕ್ತಪಡಿಸಿರುವುದು ನ್ಯಾಯಾಂಗ ವ್ಯವಸ್ಥೆ ಮಹಿಳೆಯರ ಪರ ಕಾಳಜಿವಹಿಸಿರುವುದು ನಿಜಕ್ಕೂ ಅಭಿನಂದನೀಯ.

ಪ್ರಸ್ತುತ ಸಮಾಜದಲ್ಲಿ ಮತ್ತೊಂದು ಆತಂಕಕಾರಿ ವಿಷಯವೇನೆಂದರೆ ಕ್ಷೀಣಿಸುತ್ತಿರುವ ಸ್ತ್ರೀಯ ಸಂಖ್ಯಾ ಪ್ರಮಾಣ ಭಾರತೀಯ ಜನಸಂಖ್ಯೆಯ ಅಂಕಿ–ಅಂಶಗಳು ಸ್ತ್ರೀ–ಪ್ಮರುಷರ ಅನುಪಾತ ಪ್ರಮಾಣ ಗಣನೀಯವಾಗಿ ಏರು–ಪೇರು ಆಗುತ್ತಿರುವುದು ದೃಢಪಡಿಸಿದೆ. ಇದು ಅತ್ಯಂತ ಗಂಭೀರವಾದ ವಿಷಯ. 2021 ರಲ್ಲಿ ಪ್ರತಿ ಸಾವಿರ ಪುರುಷರಿಗೆ 948 ಮಹಿಳೆಯರಿದ್ದಾರೆ. ಈ ಪ್ರಮಾಣ 2001 ರಲ್ಲಿ 933 ಇತ್ತು. 2011 ರಲ್ಲಿ 940 ಇತ್ತು. ಪಂಜಾಬ್, ಹರಿಯಾಣ ಮತ್ತು ಉತ್ತರದ ಕೆಲವು ರಾಜ್ಯಗಳಲ್ಲಿ ರಾಷ್ಟ್ರೀಯ ಸ್ತ್ರೀ–ಪುರುಷರ ಅನುಪಾತಕ್ಕಿಂತ ಕಡಿಮೆ ಇರುವುದು ಜನಸಂಖ್ಯಾ ದೃಷ್ಟಿಕೋನದಿಂದ ಸರಿಯಾದ ಬೆಳವಣಿಗೆಯಲ್ಲ. ಲಿಂಗ ಪತ್ತೆಹಚ್ಚುವಿಕೆ ಹೆಣ್ಣು ಭ್ರೂಣ ಹತ್ಯೆ ಮಾಡುವವರ ವಿರುದ್ದ ಕಠಿಣ ಕಾನೂನುಕ್ರಮ ಕೈಗೊಳ್ಳುವ ಅಗತ್ಯವಿದೆ. ಸಾಮಾಜಿಕ ದೃಷ್ಟಿಯಿಂದ ಹೆಣ್ಣು ಸಂತಾನ ಉತ್ತೇಜಿಸಬೇಕು. ಆಸ್ಪತ್ರೆಗೆ ಬಂಧುಗಳು, ನೆರೆಯವರು ಮತ್ತು ಸ್ನೇಹಿತರು ಮಗುವನ್ನು ನೋಡಲು ಬರುತ್ತಾರೆ. ಆದರೆ ಈ ಧೋರಣೆ ಬದಲಾಗಿ ಮಗು ಹೆತ್ತ ತಾಯಿಯನ್ನು ನೋಡಿ ಗೌರವಿಸಬೇಕು. ಇದೊಂದು ಗಂಭೀರ ಚರ್ಚೆ ಮತ್ತು ಚಿಂತನೆಗೆ ಕಾರಣವಾದ ಅಂಶ.

ಸಮಾಜದಲ್ಲಿ ಮಹಿಳೆಯರ ಆರೋಗ್ಯದ ವಿಷಯವು ಕೂಡ ಅತ್ಯಂತ ಮಹತ್ವದ್ದು. ಯೂನಿಸೆಫ್ ವರದಿ ಪ್ರಕಾರ ಪ್ರತಿವರ್ಷ ಸುಮಾರು ಐದೂವರೆ ಲಕ್ಷ ಮಹಿಳೆಯರು ಆರೋಗ್ಯ ಸಂಬಂಧಿ ವಿಷಯಕ್ಕೆ ಮರಣ ಹೊಂದುತ್ತಾರೆ. ದೇಶದಲ್ಲಿ ಗರ್ಭಿಣಿ ಮಹಿಳೆಯರು ಪ್ರಸವ ಸಮಯದಲ್ಲಿ ಮರಣ ಹೊಂದುವುದು ಕಳವಳಕಾರಿ ವಿಷಯ. ಪ್ರತಿಮಗುವಿನ ಜನನ ಆ ತಾಯಿಯ ಪುನರ್‌ಜನ್ಮವಾಗಿರುತ್ತದೆ. ಆದ್ದರಿಂದ ಪ್ರತಿ ಮಹಿಳೆ ಹೆರಿಗೆಗೆ ಮೊದಲು ಮತ್ತು ನಂತರ ಅಕಾಲ ಮೃತ್ಯು ಹೊಂದದಂತೆ ಮುಂಜಾಗ್ರತೆ ವಹಿಸುವುದು ಎಲ್ಲರ ಜವಾಬ್ದಾರಿಯಾಗಿದೆ. ಆರ್ಥಿಕ ಮತ್ತು ಕೌಟುಂಬಿಕ ಕಾರಣದಿಂದ ಮಹಿಳೆ ತನ್ನ ಸ್ವಂತ ಆರೋಗ್ಯ ಅಲಕ್ಷಿಸಿ ತನ್ನ ಕೌಟುಂಬಿಕ ಹೊಣೆ ನಿಭಾಯಿಸಿ ತ್ಯಾಗಮಯಿಯಾಗಿದ್ದಾಳೆ.

ವಿವಾಹಿತ ಮಹಿಳೆಗೆ ಒಂದು ವೇಳೆ ಮಕ್ಕಳಾಗುವುದು ವಿಳಂಬವಾದರೆ ಅಥವಾ ವಿವಾಹಿತ ದಂಪತಿಗಳು ಅವರದೇ ಆದ ವೈಯುಕ್ತಿಕ ಕಾರಣಗಳಿಗೆ ಮಕ್ಕಳನ್ನು ಪಡೆಯುವುದನ್ನು ಮುಂದೂಡಿದರೆ ಅಥವಾ ಮಕ್ಕಳಾಗದಿರುವುದಕ್ಕೆ ಹೆಣ್ಣೆ ಕಾರಣ ಎಂಬ ತಪ್ಪು ಕಲ್ಪನೆ ಇಂದಿಗೂ ಕೆಲವರಲ್ಲಿರುವುದು ಒಳ್ಳೆಯ ಸಂಗತಿಯಲ್ಲ. ಕೆಲವು ಪುರುಷರು ಪತ್ನಿಯರನ್ನು ಅನೈತಿಕ ಚಟುವಟಿಕೆಗೆ ಬಲತ್ಕಾರ ಮಾಡುವ ಪ್ರಸಂಗಗಳು ಕಾಣುತ್ತೇವೆ. ಹೊಲ, ಗದ್ದೆ, ಕಛೇರಿ ಮತ್ತು ಮನೆ ಕೆಲಸ ನಿರ್ವಹಿಸುವ ವೇಳೆ ನಡೆಯುವ ದೌರ್ಜನ್ಯ ಬೆಳಕಿಗೆ ಬರುವುದಿಲ್ಲ.

21ನೇ ಶತಮಾನದಲ್ಲೂ ಕೂಡ ಲಿಂಗತಾರತಮ್ಯ ಮತ್ತು ಹೆಣ್ಣು ಶಿಶುಗಳ ಅನಾದರಣೆ, ಗಂಡಿಗೆ ಹೋಲಿಕೆ, ಭೇದಗಳು ಇಂದಿಗೂ ಕಂಡು ಬರುತ್ತಿವೆ. ಮಹಿಳೆಯರ ಅಂತಸ್ತು ಕುಗ್ಗಿದರೆ ಮಕ್ಕಳ ವಿದ್ಯೆ ಕುಂಠಿತವಾಗುತ್ತದೆ. ತಾಯಿಯ ಸ್ಥಿತಿಯೇ ಕಳವಳಕಾರಿಯಾದರೆ ಮಗುವಿನ ಮಾನಸಿಕ ವಿಕಾಸ ಹೇಗೆ ಆಗಲು ಸಾಧ್ಯ. ಆದ್ದರಿಂದ ಸಮಾಜದಲ್ಲಿ ಮಹಿಳೆಯರೇ ದೊಡ್ಡ ಆಸ್ತಿ. ಮಹಿಳೆಯರ ಶ್ರಮ (ಮನೆ ಕೆಲಸ) ರಾಷ್ಟ್ರೀಯ ಆದಾಯಕ್ಕೆ ಪರಿಗಣಿಸಬೇಕು. ಜೀವನ ಸಂಗಾತಿಯ ಆಯ್ಕೆಯಲ್ಲಿ ಹೆಣ್ಣು ಮಕ್ಕಳ ಅಭಿಪ್ರಾಯ ಕೇಳಬೇಕು. ಶೀಲದ ಗುತ್ತಿಗೆ ಮಹಿಳಾ ವರ್ಗಕ್ಕೆ ಮಾತ್ರವೆಂಬ ಕಲ್ಪನೆ ಬದಲಾಗಬೇಕು. ದೇಶಕಟ್ಟುವ ಕೆಲಸ ಮಾಡುವ ಮಹಿಳೆಯರಿಗೆ ಪೂರ್ಣ ಮಾನಸಿಕ ಸ್ವಾತಂತ್ರ್ಯ ಮತ್ತು ಸಮಾನತೆಯ ಅಗತ್ಯವಿದೆ.

ಕೊನೆಯದಾಗಿ ಸಮಾಜದಲ್ಲಿ ಮಹಿಳೆಯರಿಗೆ ರಾಜಕೀಯ ಕ್ಷೇತ್ರದಲ್ಲಿ ಕಡಿಮೆ ಪ್ರಾತಿನಿಧ್ಯವಿದೆ. ದೇಶದ ಅರ್ಧದಷ್ಟು ಇರುವ ಮಹಿಳೆಯರಿಗೆ ಅಧಿಕಾರ ವಿಕೇಂದ್ರಿಕರಣದ ಎಲ್ಲಾ ಹಂತಗಳಲ್ಲೂ ಸಮಪಾಲು ಇರಬೇಕು. ಮಹಿಳಾ ಸಂಘಟನೆಗಳು ಒತ್ತಡ ಗುಂಪಾಗಿ ಕಾರ್ಯ ನಿರ್ವಹಿಸಬೇಕು. ಮಹಿಳೆಯರನ್ನು ಜಾಹೀರಾತಿನಲ್ಲಿ ಗೌರವ ಮತ್ತು ಸಭ್ಯತೆಯಿಂದ ನಡೆಸಿಕೊಳ್ಳಬೇಕು. ಸ್ತ್ರೀಯರ ಮಹತ್ವವನ್ನು ಪುರುಷನ ಬಾಳಿನಲ್ಲಿ ಗುರುತಿಸದೇ ಅವಳ ಜೀವನದಲ್ಲಿಯೇ ಗುರುತಿಸಬೇಕು. ಸ್ತ್ರೀಯರನ್ನು ಗೌರವಿಸುವ ದೇಶ ನಾಗರೀಕ ದೇಶ. ಆದ್ದರಿಂದ ನಮ್ಮ

ಏಳಿಗೆಯನ್ನು ಬಯಸುವ ಪ್ರತಿಯೊಬ್ಬ ತಂದೆ, ಅಣ್ಣ, ತಮ್ಮ ಮಹಿಳೆಯರನ್ನು ಗೌರವಿಸಬೇಕು. ಆಗ ಮಾತ್ರ ಮಹಿಳೆ ಮತ್ತು ಸಮಾಜ ಕ್ಷೇಮದಿಂದಿರಲು ಸಾಧ್ಯ.

**ಆಧಾರ ಗ್ರಂಥಗಳು**


1. Kumari V. Problems and challenges faced by urban working women in India; c2014.
2. Hans V. Basil, Sowjanya S Shetty. Education and Women Empowerment in India-Study in Dakshina Kannada District. Principal's Message; c2016. p. 5.
3. Devi Basanti. Women in the mirror of indian languages. Language in India 13.1; c2003.
4. Haq, Rana. Intersectionality of gender and other forms of identity: Dilemmas and challenges facing women in India. Gender in Management: An International Journal. 2013;28(3):171-184.
5. Nagindrappa M Radhika MK. Women exploitation in Indian modern society. International Journal of Scientific and Research Publications. 2013;3(2):1-11.
6. Misra L. Women's Issues: An Indian Perspective. Northern Book Centre, 1992, 5(5).